## ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 37 ಸೇಸಕಿ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 19.10.2015.

### ಅಧಿಸೂಚನೆ

ಕರ್ನಾಟಕ ಲೋಕ ಸೇವಾ ಆಯೋಗದಿಂದ ಮೆರಿಟ್ ಕಂ ರೋಸ್ಟರ್ ಆಧಾರದ ಮೇಲೆ ಜಲಸಂಪನ್ಮೂಲ ಇಲಾಖೆಗೆ ಆಯ್ಕೆಯಾಗಿರುವ ಈ ಕೆಳಕಂಡ ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಸಕ್ರಮಗೊಂಡ (ಸೇವಾ ಕೃಪಾಂಕ ಪಡೆದು) ಅಭ್ಯರ್ಥಿಗಳಿಗೆ ಹಾಗೂ ಇತರೆ ಅಭ್ಯರ್ಥಿಗಳಿಗೆ ಕರ್ನಾಟಕ ಸಿವಿಲ್ ಸೇವೆ (ಪರೀಕ್ಷಾರ್ಥ ಸೇವೆ) ನಿಯಮಗಳು, 1977 ರ ರೀತ್ಯಾ ಕಿರಿಯ ಇಂಜಿನಿಯರ್ (ಮೆಕ್ಯಾನಿಕಲ್) ಗಳಾಗಿ ಜಲಸಂಪನ್ಮೂಲ ಇಲಾಖೆಯಲ್ಲಿ ನೇಮಕಾತಿ ಮಾಡಿ ಆದೇಶಿಸಿದೆ.

ಆಯ್ಕೆಯಾಗಿರುವ ಸೇವೆಯಲ್ಲಿರುವ ಅಭಿಯಂತರರುಗಳು ಅವರ ಕಛೇರಿಯಿಂದ 15 ದಿವಸಗಳೊಳಗಾಗಿ ಬಿಡುಗಡೆಗೊಂಡು ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಕೆ.ಆರ್. ವೃತ್ತ, ಬೆಂಗಳೂರು – 560001 ಕಛೇರಿಗೆ ವರದಿ ಮಾಡಿಕೊಳ್ಳತಕ್ಕದ್ದು. ಉಳಿದ ನೇಮಕಗೊಂಡ ಅಭ್ಯರ್ಥಿಗಳು 15 ದಿವಸಗಳೊಳಗಾಗಿ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಕೆ.ಆರ್. ವೃತ್ತ, ಬೆಂಗಳೂರು – 560001 ಇವರ ಕಛೇರಿಗೆ ವರದಿ ಮಾಡಿಕೊಳ್ಳತಕ್ಕದ್ದು.

| ಕ್ರ. ಸಂ. | ಕ.ಲೋ.ಸೇ.ಆ.ದ ಆಯ್ಕೆ ಪಟ್ಟಿ ಕ್ರ.ಸಂ. | ಅಭ್ಯರ್ಥಿಯ ಹೆಸರು ಮತ್ತು ವಿಳಾಸ ಶ್ರೀ / ಶ್ರೀಮತಿ / ಕುಮಾರಿ | ಜನ್ಮ ದಿನಾಂಕ | ಜಾತಿ |
|---|---|---|---|---|
| 1 | 1 * | ರಾಘವೇಂದ್ರ, ಶ್ರೀ ರಾಘವೇಂದ್ರ ನಿಲಯ, ಮನೆ ನಂ: 2-11-454, ವೆಂಕಟೇಶ್ವರ ಕಾಲೋನಿ, ಬಸ್ ನಿಲ್ದಾಣದ ಹತ್ತಿರ, ಲಿಂಗಸಗೂರು, ರಾಯಚೂರು - 584122 | 21.04.1972 | ಸಾಮಾನ್ಯ |
| 2 | 2 * | ವಿಶ್ವನಾಥ ಚವ್ಹಾಣ, C/o. ರಮೇಶ್ ಸಿ. ನಾಯ್ಕ, ಮನೆ ನಂ: ಕೆಯು 14/115, ಈಶ್ವರ್ ಬಡಾವಣೆ, ರಾಜೀವ ಗಾಂಧಿ ನಗರ, ಗದಗ - 582101 | 17.07.1971 | ಸಾಮಾನ್ಯ / ಪ.ಜಾ. |

| | | | | |
|---|---|---|---|---|
| 3 | 3<br>* | ಶಿವಪ್ಪ ಎಸ್.ಆರ್. ಚಲವಾದಿ,<br>ತಂಗಡಗಿ ಪೋಸ್ಟ್, ಮುದ್ದೇಬಿಹಾಳ್ ತಾ:<br>ಬಿಜಾಪುರ - 586129 | 01.06.1969 | ಸಾಮಾನ್ಯ / ಪ.ಜಾ. |
| 4 | 4<br>* | ವಿದ್ಯಾಧರ ನ್ಯಾಮಗೊಂಡ,<br>ಮಠಪತಿ ಗಲ್ಲಿ, ಅಲವಿ ಮಸೀದಿ ರಸ್ತೆ,<br>ಬಿಜಾಪುರ - 586101 | 22.07.1966 | ಸಾಮಾನ್ಯ |
| 5 | 5<br>* | ರವೀಂದ್ರ ಬಾಬು ಜೋಶಿ,<br>3ನೇ ಕ್ರಾಸ್, ವಿವೇಕಾನಂದ ರಸ್ತೆ,<br>ವಿಧ್ಯಾಗಿರಿ, ಬಾಗಲಕೋಟೆ – 587102. | 06.11.1966 | ಸಾಮಾನ್ಯ / ಸಿ1 |
| 6 | 6<br>* | ಶಂಕರ ಬಂಡಿವಡ್ಡರ್,<br>ದತ್ತಾತ್ರೇಯ ಕೃಪ, ಪ್ಲಾಟ್ ನಂ.32,<br>ಗೆವರ್‌ಚಂದ ನಗರ, ಅಥಣಿ ರಸ್ತೆ,<br>ಬಿಜಾಪುರ - 586102 | 20.05.1966 | ಪ.ಜಾ. |
| 7 | 7<br>* | ಜಿ.ಟಿ. ಜಟಾಧರ,<br>ಚಿರತಗೊಂಡು ಅಂಚೆ, ಕೊಡ್ಲಗಿ ತಾ:<br>ಬಳ್ಳಾರಿ - 583126 | 01.06.1962 | 3 ಬಿ |
| 8 | 8<br>* | ದಸ್ತಗೀರ ಚೌಧರಿ,<br>ಮನೆ ನಂ: 3 -2 ವಾರ್ಡ ಸಂ: 2,<br>ಜೋಗುರು ಅಂಚೆ, ಗುಲ್ಬಗಾ ತಾ: ಮತ್ತು<br>ಜಿಲ್ಲೆ- 585265 | 11.02.1959 | 2 ಬಿ |
| 9 | 9<br>* | ಬಸವರಾಜ್ ಹುಂಡೇಕರ್,<br>ಬೆನ್ನೂರು ಅಂಚೆ, ಬಾಗಲಕೋಟೆ ತಾ:<br>ಮತ್ತು ಜಿಲ್ಲೆ- 587111 | 01.05.1962 | 2 ಎ |
| 10 | 10<br>* | ಜಗದೀಶ್ ಬಿ.<br>ಸಂ: 5-1-229/14 ಎಫ್, ಲಕ್ಷ್ಮಿನಗರ,<br>ಯಾದಗೀರ ತಾ: ಯಾದಗಿರಿ -<br>585202 | 02.03.1970 | ಸಿ1 |
| 11 | 11<br>** | ರತ್ನವರ್ಮ ಹೆಗಡೆ,<br>C/o ಬೀರಣ್ಣ ಮೊಗ್ತ, ಮಕರಂದ,<br>1502, ಕೆ.ಬಿ ರಸ್ತೆ, ಯಲ್ಲಾಪುರ, ಉತ್ತರ<br>ಕನ್ನಡ - 581359 | 01.06.1962 | ಸಾಮಾನ್ಯ / ಮಾಜಿ ಸೈನಿಕ |
| 12 | 12<br>** | ಅಶೋಕ ಭೀಮಪ್ಪ ಬಿಳಗಿ,<br>ವಂದಾಳ ಅಂಚೆ, ಬಸವನ ಬಾಗೇವಾಡಿ<br>ತಾ: ಬಿಜಾಪುರ - 586201 | 01.06.1968 | 2 ಎ |
| 13 | 13<br>** | ಹನುಮಂತರಾಯ ಕೆ.<br>ಇಂಡಸ್ಟ್ರಿಯಲ್ ಎಕ್ಸ್‌ಟೆನ್ಸನ್ ಆಫೀಸರ್,<br>ರೂರಲ್ ಇಂಡಸ್ಟ್ರೀಸ್ ವಿಂಗ್, ವಾಣಿಜ್ಯ<br>ಮತ್ತು ಕೈಗಾರಿಕಾ ಇಲಾಖೆ, ತಾ.ಪಂ.<br>ಆಫೀಸ್, ಹರಪನಹಳ್ಳಿ ತಾ: ದಾವಣಗೆರೆ<br>- 583131 | 20.08.1975 | ಪ.ಜಾ. |

| | | | | |
|---|---|---|---|---|
| 14 | 14<br>** | ಬಾಲಸುಬ್ರಮಣ್ಯ,<br>ಮನೆ ನಂ. 741/2, ಡಾ: ಮೋದಿ ರಸ್ತೆ, ಶಕೀರಾ ಬ್ಯೂಟಿ ಪಾರ್ಲರ್ ಕೆಳಗಡೆ, ಪಿ.ಜೆ. ಎಕ್ಸ್‌ಟೆನ್ಸನ್, ದಾವಣಗೆರೆ – 577002. | 20.07.1973 | ಸಾಮಾನ್ಯ / ಅಂಗವಿಕಲ |

* ಸೇವೆಯಲ್ಲಿರುವ ಅಭ್ಯರ್ಥಿಗಳು

** ಇತರೆ ಅಭ್ಯರ್ಥಿಗಳು

<u>ಮುಖ್ಯವಾದ ಸೂಚನೆಗಳು:</u>

1. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂ: 2808-2826/2014, 622-623/2015, 1401/2015, 2287/2015, 1403/2015, 953-956/2015, 9427-9436/2014, 1004 -1005/2015, 1117-1129/2015, 796-803/2015, 181-192/2015, 586/2015, 392/2015, 5345/2015, 4392-4934/2015, 5215/2015, 5087/2015, 187/2015, 3075/2014, 3078/2014, 3128/2014 ಮತ್ತು 1401/2015 ಮತ್ತು ನೇಮಕಾತಿಗೆ ಸಂಬಂಧಿಸಿದಂತೆ ನ್ಯಾಯಾಲಯ / ನ್ಯಾಯ ಮಂಡಳಿಗಳಲ್ಲಿರುವ ಇನ್ನಿತರೆ ಮೊಕದ್ದಮೆ / ಅರ್ಜಿಗಳಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳಲಾಗುವ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.
2. ಅಭ್ಯರ್ಥಿಗಳ ನೇಮಕಾತಿಯು ತಾತ್ಕಾಲಿಕವಾಗಿದ್ದು, ಅವರ ನೇಮಕಾತಿ ಹಾಗೂ ಸೇವಾ ಷರತ್ತುಗಳು ಆಗಿಂದಾಗ್ಗೆ ಜಾರಿಯಲ್ಲಿರುವ ಸರ್ಕಾರಿ ಆದೇಶಗಳು / ಕಾಲಕಾಲಕ್ಕೆ ಹೊರಡಿಸಲ್ಪಡುವ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ.
3. ಪ್ರಸ್ತುತ ಸೇವೆಯಲ್ಲಿರುವವರನ್ನು ಹೊರತುಪಡಿಸಿ, ನೇಮಕಗೊಂಡ ಇತರೆ ಅಭ್ಯರ್ಥಿಗಳಿಗೆ ರೂ. 17650-450-19000-500-21000-600-24600-700-28800-800-32000 ರ ವೇತನ ಶ್ರೇಣಿಯನ್ನು ನಿಗದಿಪಡಿಸಿದೆ.
4. ಈ ನೇಮಕಾತಿಯ ಸಂಬಂಧ ಅಭ್ಯರ್ಥಿಯು ಯಾವುದೇ ತಪ್ಪು ಮಾಹಿತಿ / ಖೋಟಾ ದಾಖಲೆಗಳು, ಇನ್ನಿತರೇ ಪ್ರಮಾಣ ಪತ್ರಗಳ ಮೂಲಕ ಹಾಗೂ ತಪ್ಪು ನಿರೂಪಣೆಯಿಂದ ನೇಮಕಾತಿ ಪಡೆದಿರುವುದು ಕಂಡು ಬಂದಲ್ಲಿ, ಅವರ ನೇಮಕಾತಿಯನ್ನು ರದ್ದುಪಡಿಸುವ ಹಕ್ಕನ್ನು ಸರ್ಕಾರವು ಕಾಯ್ದಿರಿಸಿಕೊಂಡಿದೆ.
5. ಪ್ರಸ್ತುತ ಸೇವೆಯಲ್ಲಿರುವವರನ್ನು ಹೊರತುಪಡಿಸಿ, ನೇಮಕಾತಿಯಾದ ಅಭ್ಯರ್ಥಿಯು ಕೆಲಸಕ್ಕೆ ಸೇರಿದ ದಿನಾಂಕದಿಂದ 2 ವರ್ಷದ ಅವಧಿಯವರೆಗೆ ಪರೀಕ್ಷಾರ್ಥ ಅವಧಿಯಲ್ಲಿರುತ್ತಾರೆ. ಇವರ ಪರೀಕ್ಷಾರ್ಥ ಸೇವಾವಧಿ ಘೋಷಣೆ, ವಾರ್ಷಿಕ ಮುಂಬಡ್ತಿ ಮತ್ತು ಇತರೆ ವಿಷಯಗಳು ಕರ್ನಾಟಕ ಸರ್ಕಾರಿ ಸೇವಾ (ಪರೀಕ್ಷಾರ್ಥ ಸೇವೆ) ನಿಯಮಗಳು, 1977ಕ್ಕೆ ಒಳಪಟ್ಟಿರುತ್ತದೆ.

6. ಹೊಸದಾಗಿ ನೇಮಕಗೊಂಡ ಅಭ್ಯರ್ಥಿಯು ಮೇಲ್ಕಂಡ ಅವಧಿಯಲ್ಲಿ ಹುದ್ದೆಗೆ ನಿಗಧಿಪಡಿಸಿರುವ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕಾಗುತ್ತದೆ.

7. ಹೊಸದಾಗಿ ನೇಮಕಗೊಂಡ ಅಭ್ಯರ್ಥಿಯು ಕೆಲಸಕ್ಕೆ ಸೇರಿದ ಕೂಡಲೇ ಕರ್ನಾಟಕ ರಾಜ್ಯ ವಿಮೆಯನ್ನು ಮತ್ತು ಹೊಸ ಪಿಂಚಣಿ ಪದ್ಧತಿಯನ್ನು ಮಾಡಿಸತಕ್ಕದ್ದು.

8. ಅಭ್ಯರ್ಥಿಯ ನಡತೆ ಬಗ್ಗೆ ಇಬ್ಬರು ಸ್ಥಳೀಯ ಪತ್ರಾಂಕಿತ ಅಧಿಕಾರಿಗಳು / ಗಣ್ಯ ವ್ಯಕ್ತಿಗಳಿಂದ ಪ್ರಮಾಣ ಪತ್ರ ಒದಗಿಸುವುದು.

9. ಅಭ್ಯರ್ಥಿಯು ಕೆಲಸಕ್ಕೆ ಸೇರುವ ಸಮಯದಲ್ಲಿ ಈ ಕೆಳಗೆ ತಿಳಿಸಿರುವ ಮೂಲ ದಾಖಲೆಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಒದಗಿಸತಕ್ಕದ್ದು.

ಅ) ವಿದ್ಯಾರ್ಹತೆಯ ಮೂಲ ಪ್ರಮಾಣ ಪತ್ರ (ಡಿಪ್ಲೋಮಾ (ಮೆಕ್ಯಾನಿಕಲ್) ಇಂಜಿನಿಯರಿಂಗ್ ಅಥವಾ ತತ್ಸಮಾನ ವಿದ್ಯಾರ್ಹತೆ ಪಾಸು ಮಾಡಿರುವ ಮೂಲ ಪ್ರಮಾಣ ಪತ್ರ ಮತ್ತು ಎಲ್ಲಾ ಸೆಮಿಸ್ಟರ್ / ವರ್ಷಗಳ ಅಂಕಪಟ್ಟಿಗಳು).

ಆ) ಅಭ್ಯರ್ಥಿಗಳು ಮಾಜಿ ಸೈನಿಕರಾಗಿದ್ದರೆ, ಅದರ ಮೂಲ ಪ್ರಮಾಣ ಪತ್ರವನ್ನು ಒದಗಿಸತಕ್ಕದ್ದು.

ಇ) ವಯಸ್ಸು / ಹುಟ್ಟಿದ ದಿನಾಂಕದ ಬಗ್ಗೆ ಅಧಿಕೃತ ದಾಖಲೆ (ಎಸ್.ಎಸ್.ಎಲ್.ಸಿ. ಅಂಕಪಟ್ಟಿ) ಒದಗಿಸುವುದು.

ಈ) ಅಭ್ಯರ್ಥಿಯ ಸ್ಥಿರ ಮತ್ತು ಚರಾಸ್ತಿಗಳ ಬಗ್ಗೆ ದೃಢೀಕರಣ ಪತ್ರ.

ಉ) ವಿವಾಹಿತರಾಗಿದ್ದರೆ ಒಂದಕ್ಕಿಂತ ಹೆಚ್ಚಿಗೆ ಜೀವಂತರಾಗಿರುವ ಪತಿ / ಪತ್ನಿಯನ್ನು ಹೊಂದಿಲ್ಲವೆಂದು ಪ್ರಮಾಣೀಕರಿಸುವ ದೃಢೀಕರಣ ಪತ್ರ.

ಊ) ಭಾರತ ಸಂವಿಧಾನಕ್ಕೆ ನಿಷ್ಠೆಯಿಂದ ಸೇವೆ ಸಲ್ಲಿಸುವ ಪ್ರಮಾಣ ಪತ್ರ.

10. ಅಭ್ಯರ್ಥಿಯು ನೀಡುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಎಲ್ಲವೂ ತೃಪ್ತಿಕರವಾಗಿರುತ್ತದೆಂದು ಕಂಡು ಬಂದ ನಂತರ ಸದರಿ ಅಭ್ಯರ್ಥಿಯನ್ನು ವರದಿ ಮಾಡಿಕೊಳ್ಳಲು ಅನುಮತಿ ನೀಡುವುದು. ಏನಾದರೂ ಅನುಮಾನ / ನ್ಯೂನತೆ ಇದ್ದರೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವುದು.

11. ಈಗಾಗಲೇ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಕೆಲಸಕ್ಕೆ ಹಾಜರಾಗುವಾಗ ಅವರು ಹಿಂದೆ ಕೆಲಸ ನಿರ್ವಹಿಸುತ್ತಿರುವ ಕಛೇರಿಯಿಂದ ಪಡೆದ ಬಿಡುಗಡೆ ಪತ್ರವನ್ನು ನೇಮಕಾತಿ ಮಾಡಲಾದ ಕಛೇರಿಗೆ ಸಲ್ಲಿಸತಕ್ಕದ್ದು ಹಾಗೂ ಕಚೇರಿಯ ಮೇಲಧಿಕಾರಿಗಳು ಕಾಲಮಿತಿಯೊಳಗಾಗಿ ಅವರುಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸತಕ್ಕದ್ದು.

## ಭಾಗ-2

**ಸೇವೆಯಲ್ಲಿರುವ ಅಭಿಯಂತರರುಗಳಿಗೆ ಕರ್ನಾಟಕ ಸಿವಿಲ್ ಸೇವೆ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 19 (i) ರ ಅನ್ವಯ 2 ವರ್ಷಗಳ ಪರೀಕ್ಷಾರ್ಥ ಅವಧಿಯಿಂದ ವಿನಾಯತಿ ನೀಡಲಾಗಿದೆ.**

ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಸಕ್ರಮಗೊಂಡು (ಸೇವಾ ಕೃಪಾಂಕ ಪಡೆದು) ಕರ್ನಾಟಕ ಲೋಕ ಸೇವಾ ಆಯೋಗದಿಂದ ಜಲಸಂಪನ್ಮೂಲ ಇಲಾಖೆಗೆ ಆಯ್ಕೆಯಾಗಿರುವ ಅಭಿಯಂತರರುಗಳನ್ನು ಕರ್ನಾಟಕ ಸಿವಿಲ್ ಸೇವೆಗಳು (ಜಲಸಂಪನ್ಮೂಲ ಸೇವೆ) (ಸಹಾಯಕ ಇಂಜಿನಿಯರುಗಳ ಮತ್ತು ಕಿರಿಯ ಇಂಜಿನಿಯರುಗಳ ವಿಶೇಷ ನೇಮಕಾತಿ) ಅಧಿನಿಯಮ, 62/2013 ರ ಸೆಕ್ಷನ್ 11(2) ರನ್ವಯ

"ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಜಲಸಂಪನ್ಮೂಲ ಸೇವೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಹಾಗೂ ತಾತ್ಕಾಲಿಕ ಆಧಾರದ ಮೇಲೆ ನೇಮಕಗೊಂಡ ಸಹಾಯಕ ಇಂಜಿನಿಯರುಗಳು ಹಾಗೂ ಕಿರಿಯ ಇಂಜಿನಿಯರುಗಳ ವಿಲೀನ) (ವಿಶೇಷ) ನಿಯಮಗಳು, 2002 ರ ಪ್ರಾರಂಭವಾಗುವುದಕ್ಕೆ ಮುಂಚೆ ತಾತ್ಕಾಲಿಕ ಅಥವಾ ಗುತ್ತಿಗೆ ಆಧಾರದ ಸಹಾಯಕ ಇಂಜಿನಿಯರುಗಳು ಅಥವಾ ಕಿರಿಯ ಇಂಜಿನಿಯರುಗಳು ಸಲ್ಲಿಸಿದ ಸೇವೆಯನ್ನು, ರಜೆ, ವೇತನ, ಪಿಂಚಣಿ ಅಥವಾ ಜೇಷ್ಠತೆಯ ಉದ್ದೇಶಕ್ಕಾಗಿ ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ:

ಪರಂತು, ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಜಲಸಂಪನ್ಮೂಲ ಸೇವೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಹಾಗೂ ತಾತ್ಕಾಲಿಕ ಆಧಾರದ ಮೇಲೆ ನೇಮಕಗೊಂಡ ಸಹಾಯಕ ಇಂಜಿನಿಯರುಗಳು ಹಾಗೂ ಕಿರಿಯ ಇಂಜಿನಿಯರುಗಳ ವಿಲೀನ) (ವಿಶೇಷ) ನಿಯಮಗಳು, 2002 ರ ಪ್ರಾರಂಭದ ನಂತರ ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಲೋಕೋಪಯೋಗಿ (ನೀರಾವರಿ ಸೇವೆ) ಯಲ್ಲಿ ತಾತ್ಕಾಲಿಕ ಅಥವಾ ಗುತ್ತಿಗೆ ಸಹಾಯಕ ಇಂಜಿನಿಯರುಗಳು ಅಥವಾ ಕಿರಿಯ ಇಂಜಿನಿಯರುಗಳು ಸಲ್ಲಿಸಿದ ಸೇವೆಯನ್ನು ಹಾಗೂ ತದನಂತರ ಸಲ್ಲಿಸಿದ ಸೇವೆಯನ್ನು ಅವರ ರಜೆ, ವೇತನ, ಪಿಂಚಣಿ ಅಥವಾ ಜೇಷ್ಠತೆ ಉದ್ದೇಶಕ್ಕಾಗಿ ಗಣನೆಗೆ ತೆಗೆದುಕೊಳ್ಳತಕ್ಕದ್ದು:"

ಇದನ್ನು ಪರಿಗಣಿಸಿ ಸೇವೆಯಲ್ಲಿದ್ದು, ಕಿರಿಯ ಇಂಜಿನಿಯರ್ ಹುದ್ದೆಯಿಂದ ವೃಂದ ಬದಲಾವಣೆ ಹೊಂದಿ ಸಹಾಯಕ ಅಭಿಯಂತರರಾಗಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವುದನ್ನು ಪರಿಗಣಿಸಿ ಈ ಕೆಳಕಂಡ ಅಧಿಕಾರಿಗಳಿಗೆ ಅವರ ಜೇಷ್ಠತಾರ್ಹತೆಯನ್ನು ಗಣನೆಗೆ ತೆಗೆದುಕೊಂಡು ಸಹಾಯಕ ಅಭಿಯಂತರರು (ಗ್ರೇಡ್-2) / ಸಹಾಯಕ ಅಭಿಯಂತರರು ಹುದ್ದೆಗೆ ಮರು ನೇಮಕಾತಿ ಮಾಡಿ ತಕ್ಷಣವೇ ಜಾರಿಗೆ ಬರುವಂತೆ ಈ ಆದೇಶ ಹೊರಡಿಸಿದೆ.

| ಕ್ರ. ಸಂ. | ಕ.ಲೋ.ಸೇ.ಆ. ದ ಆಯ್ಕೆ ಪಟ್ಟಿ ಕ್ರ.ಸಂ. | ಅಭ್ಯರ್ಥಿಯ ಹೆಸರು ಮತ್ತು ವಿಳಾಸ ಶ್ರೀ / ಶ್ರೀಮತಿ / ಕುಮಾರಿ | ಜನ್ಮ ದಿನಾಂಕ | ಜಾತಿ | ಈ ಆದೇಶದಂತೆ ಸದರಿ ಅಧಿಕಾರಿಗಳು ಮುಂದುವರೆಯ ಬೇಕಾದ ಹುದ್ದೆ |
|---|---|---|---|---|---|
| 1 | 2 | ವಿಶ್ವನಾಥ ಚವ್ಹಾಣ, C/o. ರಮೇಶ್ ಸಿ. ನಾಯ್ಕ, ಮನೆ ನಂ: ಕೆಯು 14/115, ಈಶ್ವರ್ ಬಡಾವಣೆ, ರಾಜೀವ ಗಾಂಧಿ ನಗರ, ಗದಗ - 582101 | 17.07.1971 | ಸಾಮಾನ್ಯ / ಪ.ಜಾ. | ಸಹಾಯಕ ಅಭಿಯಂತರರು (ಗ್ರೇಡ್-2) |

| | | | | | |
|---|---|---|---|---|---|
| 2 | 4 | ವಿಧ್ಯಾದಾರ ನ್ಯಾಮಗೊಂಡ, ಮಠಪತಿ ಗಲ್ಲಿ, ಅಲವಿ ಮಸೀದಿ ರಸ್ತೆ, ಬಿಜಾಪುರ - 586101 | 22.07.1966 | ಸಾಮಾನ್ಯ | ಸಹಾಯಕ ಅಭಿಯಂತರರು |
| 3 | 6 | ಶಂಕರ ಬಂಡಿವಡ್ಡರ್, ದತ್ತಾತ್ರೇಯ ಕೃಪ, ಪ್ಲಾಟ್ ನಂ.32, ಗೆವರ್‌ಚಂದ ನಗರ, ಅಥಣಿ ರಸ್ತೆ, ಬಿಜಾಪುರ - 586102 | 20.05.1966 | ಪ.ಜಾ. | ಸಹಾಯಕ ಅಭಿಯಂತರರು (ಗ್ರೇಡ್-2) |
| 4 | 8 | ದಸ್ತಗೀರ ಚೌಧರಿ, ಮನೆ ನಂ: 3 -2 ವಾರ್ಡ ಸಂ: 2, ಜೋಗುರು ಅಂಚೆ, ಗುಲ್ಬಗಾ ತಾ: ಮತ್ತು ಜಿಲ್ಲೆ- 585265 | 11.02.1959 | 2 ಬಿ | ಸಹಾಯಕ ಅಭಿಯಂತರರು |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

19/12/15

**(ಶಂಕರ್ ಎಸ್.)**
ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ (ಸೇವೆಗಳು-ಬಿ)

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಇವರಿಗೆ, ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 50 ಪ್ರತಿಗಳನ್ನು ಒದಗಿಸುವಂತೆ ಕೋರಲಾಗಿದೆ.

<u>ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಈ ಕೆಳಕಂಡವರಿಗೆ ರವಾನಿಸಿದೆ:</u>

1. ಮಹಾಲೇಖಪಾಲರು, {(ಜಿ & ಎಸ್ ಎಸ್ ಎ) (ಇ & ಆರ್ ಎಸ್ ಎ), (ಎ & ಇ)} ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು / ಆಲಮಟ್ಟಿ.
3. ಮುಖ್ಯ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಆನಂದರಾವ್ ವೃತ್ತ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗಸೌಧ, ಬೆಂಗಳೂರು.
6. ಸಂಬಂಧಪಟ್ಟ ಅಭ್ಯರ್ಥಿಗಳಿಗೆ (ನೋಂದಣಿ ಅಂಚೆ ಸ್ವೀಕೃತಿ ಮೂಲಕ).

<u>ಪ್ರತಿ ಮಾಹಿತಿಗಾಗಿ:</u>

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ.
2. ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ.
3. ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು.
4. ಸರ್ಕಾರದ ಉಪ ಕಾರ್ಯದರ್ಶಿ (ಸೇವೆಗಳು), ಜಲ ಸಂಪನ್ಮೂಲ ಇಲಾಖೆ.
5. ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿ.